ದಿಃ 02.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ಪ್ರತಿವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. 1 ನೇ ವಾದಿಯು ನನಗೆ ನೀಡಿರುವ ಅಧಿಕಾರ ಪತ್ರವನ್ನು ಹಾಜರು ಮಾಡಿದ್ದು ನಿ.ಡಿ.1 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 19.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದಮರೆದ ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ಪ್ರತಿವಾದಿ ಪರವಾಗಿ

3. Index of Land ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.2 ಎಂದು ಗುರುತಿಸಲಾಯಿತು, Mutation ರಿಜಿಸ್ಟರ್ ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.3 ಎಂದು ಗುರುತಿಸಲಾಯಿತು, Grant Certificate ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.4 ಎಂದು ಗುರುತಿಸಲಾಯಿತು, ಬಿ. ಹೊಸಹಳ್ಳಿ ಗ್ರಾಮದ ಸರ್ವೆ ನಂಬರ್ 114 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಡಿ.5 ಎಂದು ಗುರುತಿಸಲಾಯಿತು.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ಮಧ್ಯಂತರ ಆದೇಶದ ಮೇರೆಗೆ ದಿಃ 09.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ಪ್ರತಿವಾದಿ ಪರವಾಗಿ

4. ಸರ್ವೆ ತಕ್ತೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.6 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಎಸ್.ಡಿ ವಕೀಲರಿಂದ ಪ್ರತಿವಾದಿ ಪರವಾಗಿ

5. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ. ಸಮಯಾವಕಾಶ ನೀಡಲಾಗಿದೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಎಸ್.ಡಿ ವಕೀಲರಿಂದ ವಾದಿ ಪರವಾಗಿ

6. ಮೃತ ವಾದಿ ಲಕ್ಷ್ಮಣ ರವರಿಗೆ ಸರ್ವೆ ನಂಬರ್ 96/3 ರಲ್ಲಿ 1 ಎಕರೆ 36 ಗುಂಟೆ ಜಮೀನು ಇತ್ತು ಎಂದರೆ ಸರಿ. ಆ ಜಮೀನಿನ ಮಾಲೀಕರು ಲಕ್ಷ್ಮಣ ಆಗಿದ್ದರು ಎಂದರೆ ಸರಿ. ಲಕ್ಷ್ಮಣ ರವರು ತೀರಿಕೊಂಡ ಬಳಿಕ ಅವರ ಮಕ್ಕಳು ಆ ಜಮೀನಿನ ವಾರಸುದಾರರು ಎಂದರೆ ಸರಿ. 2017-18 ರಲ್ಲಿ ಲಕ್ಷ್ಮಣ ರವರು ಸದರಿ ಜಮೀನನ್ನು ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿ. ಆ ಕ್ರಯ ಪತ್ರವನ್ನು ದಿಃ 17.12.2021 ರಲ್ಲಿ ತಿದ್ದುಪಡಿ ಮಾಡಿಕೊಂಡಿದ್ದರು ಎಂದರೆ ಸರಿ.

7. ವಾದಿಯ ಜಮೀನಿನ ಉತ್ತರ ದಿಕ್ಕಿಗೆ ನಾವು ಮತ್ತು 2 ನೇ ಪ್ರತಿವಾದಿ ಇದ್ದೇವೆ ಎಂದರೆ ಸರಿ. ಆ ಜಮೀನಿನ ದಕ್ಷಿಣ ದಿಕ್ಕಿಗೆ ಬೋಬಮ್ಮ ರವರ ಜಮೀನು ಇದೆ ಎಂದರೆ ಸರಿ. ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಸುಮಿತ್ರೇಗೌಡ ಮತ್ತು ಶಾಂತಕುಮಾರ್ ರವರ ಜಮೀನು ಇದೆ ಎಂದರೆ ಸರಿ. ವಾದಿ 2017 ರಲ್ಲಿ ಜಮೀನನ್ನು ಖರೀದಿಸುವಾಗ ಅಳತೆಯನ್ನು ಮಾಡಿಸಿದ್ದರು ಎಂದರೆ ಸರಿ. ಉತ್ತರ ದಿಕ್ಕಿಗೆ ಇರುವ ನಮ್ಮ ಜಮೀನನ್ನು ನಮ್ಮ ತಂದೆ ಅಳತೆ ಮಾಡಿಸಿದ್ದರು. 2 ನೇ ಪ್ರತಿವಾದಿ ತನ್ನ ಜಮೀನನ್ನು ಅಳತೆ ಮಾಡಿಸಿದ ವಿಚಾರ ನನಗೆ ಗೊತ್ತಿಲ್ಲ. ನಮ್ಮ ಜಮೀನನ್ನು 30 ವರ್ಷಗಳ ಹಿಂದೆ ಅಳತೆ ಮಾಡಿಸಿದ್ದರು. ನಮ್ಮ ಜಮೀನು ನಮಗೆ ದರ್ಕಾಸು ಮೂಲಕ ಮಂಜೂರಾಗಿತ್ತು. 2 ನೇ ಪ್ರತಿವಾದಿಗೆ ಆಕೆಯ ಜಮೀನು ದರ್ಕಾಸು ಮೂಲಕ ಮಂಜೂರಾಗಿತ್ತು.

8. ವಾದಿ ತಮ್ಮ ಜಮೀನಿನಲ್ಲಿ ಕಾಫಿ ಬೆಳೆದಿದ್ದಾರೆ ಎಂದರೆ ಸರಿ. 2019 ರ ನಂತರ ನಾವು ಸರ್ವೆ ಮಾಡಲು ಅರ್ಜಿಯನ್ನು ಸಲ್ಲಿಸಿದ್ದೇವೆ. ಸರ್ವೆಯರ್ ಸ್ಥಳಕ್ಕೆ ಬಂದು ಪೋಡಿ ಮಾಡಿ ಹೋಗಿದ್ದಾರೆ. ಆ ಪೋಡಿಯ ಸ್ಕೆಚ್ ಅನ್ನು ಮಾಡಿ 2 ವರ್ಷ ಕಳೆದಿದೆ. ಆ ಸ್ಕೆಚ್ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ. ಆ ಅಳತೆ ಮಾಡುವಾಗ ವಾದಿಗೆ ನೋಟೀಸು ನೀಡಿರಲಿಲ್ಲ. ಸಾಕ್ಷಿ ಸ್ವತಃ ಮುಂದುವರೆದು ನೋಟೀಸು ನೀಡಿದ್ದರು ಎಂದು ನುಡಿಯುತ್ತಾರೆ. ಅಳತೆ

ಮಾಡುವಾಗ ದುಗ್ಗಮ್ಮ, ಸುಮಿತ್ರೇಗೌಡ, ಬೋಬಾಚಾರಿ ರವರಿಗೆ ನೋಟೀಸು ನೀಡಿದ್ದರು. ಅಳತೆ ಮಾಡುವ ಸಮಯದಲ್ಲಿ ದುಗ್ಗಮ್ಮ, ಸುಬ್ಬಯ್ಯ ಎಂಬುವವರು ಇದ್ದರು. ಅಳತೆ ಮಾಡುವಾಗ 2 ನೇ ಪ್ರತಿವಾದಿ ವೀಣಾ ರವರಿಗೆ ನೋಟೀಸು ನೀಡಿದ್ದರು, 2 ನೇ ಪ್ರತಿವಾದಿಯು ಸಹ ಹಾಜರಿದ್ದರು. ಸರ್ವೆ ನಂಬರ್ 114 ರಲ್ಲಿ ನಮಗೆ 6 ಎಕರೆ 3 ಗುಂಟೆ ಜಮೀನು ಇರುತ್ತದೆ. 6 ಎಕರೆ 3 ಗುಂಟೆ ಪೈಕಿ 4 ಎಕರೆ 3 ಗುಂಟೆ ಜಮೀನು ಯಾರ ಸ್ವಾಧೀನದಲ್ಲಿ ಇದೆ ಎಂದರೆ ಸಾಕ್ಷಿ ಸುಬ್ಬಯ್ಯ ರವರ ಹೆಸರಿನಲ್ಲಿ 2 ಎಕರೆ, ದುಗ್ಗಮ್ಮ ರವರ ಹೆಸರಿಗೆ 2 ಎಕರೆ ಮತ್ತು ನಮ್ಮ ತಂದೆ ಪದ್ಮಯ್ಯ ರವರ ಹೆಸರಿಗೆ 2 ಎಕರೆ ಜಮೀನು ಇರುತ್ತದೆ. 3 ಗುಂಟೆ ಜಮೀನು ಸುಬ್ಬಯ್ಯ ರವರ ಬಳಿ ಇರುತ್ತದೆ. ನಕ್ಷೆಯಲ್ಲಿ ಈ ಮೇಲೆ ಹೇಳಿದವರ ವಿಸ್ತೀರ್ಣವನ್ನು ಕಾಣಿಸಿಲ್ಲ.

9. ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ದುಗ್ಗಮ್ಮ ರವರ ಜಮೀನು ಬರುತ್ತದೆ . 2 ನೇ ಪ್ರತಿವಾದಿಯ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿ ಬರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯ ಜಮೀನಿನ ಸರ್ವೆ ನಂಬರ್ 98. 2 ನೇ ಪ್ರತಿವಾದಿ ತಮ್ಮ ಜಮೀನಿನಲ್ಲಿ, ಕಾಫಿ, ಅಡಿಕೆ ಮತ್ತು ಮೆಣಸು ಬೆಳೆದಿರುತ್ತಾರೆ. ನಿ.ಡಿ.6 ನಕ್ಷೆಯಲ್ಲಿ ಐಟಂ ನಂಬರ್ 1 ರಲ್ಲಿ ಸರ್ಕಾರಿ 4 ಎಕರೆ 3 ಗುಂಟೆ ಎಂದು ಬರೆದಿದೆ ಎಂದರೆ ಸರಿ. ನಿ.ಡಿ.6 ನಕ್ಷೆಯಲ್ಲಿ ದಕ್ಷಿಣ ದಿಕ್ಕಿಗೆ ಸರ್ವೆ ನಂಬರ್ 115 ಎಂದು ಬರೆಯಲಾಗಿದೆ, ಪ್ರತಿವಾದಿಯ ಹೆಸರನ್ನು ಬರೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ವಾದಿಯ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ವಾದಿಯ ಜಮೀನು ಬರುತ್ತದೆ. ನಿ.ಡಿ.6 ಅನ್ನು ಈ ಕೇಸಿಗಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ಉದ್ದೇಶ ಪೂರ್ವಕವಾಗಿ ವಾದಿಯ ಜಮೀನನ್ನು ನಿ.ಡಿ.6 ರ ದಕ್ಷಿಣ ದಿಕ್ಕಿನಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ.

10. ನಿ.ಡಿ.5 ಆರ್.ಟಿ.ಸಿ ಯಲ್ಲಿ ಕಾಣಿಸಿರುವ ದುಗ್ಗಮ್ಮ ರವರ ಹೆಸರನ್ನು ನಿ.ಡಿ.6 ರಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ನಿ.ಡಿ.6 ಅನ್ನು ಸ್ಥಳಕ್ಕೆ ಭೇಟಿ ಮಾಡಿ ತಯಾರಿಸಿದ್ದರೆ ಅದರಲ್ಲಿ ದುಗ್ಗಮ್ಮ ರವರ ಹೆಸರನ್ನು

ಕಾಣಿಸುತ್ತಿದ್ದೆವು, ಸದರಿ ದಾಖಲೆ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪೋಡನ್ನು 2 ವರ್ಷಗಳ ಹಿಂದೆ ಮಾಡಿರುತ್ತಾರೆ. ಜಮೀನಿನ ಪೋಡು ಆದರೆ ಮೂಲ ಸರ್ವೆ ನಂಬರ್ ಬದಲಾಗಿ ಗ್ರಾಮದ ಸರ್ವೆ ನಂಬರ್ ಬರುತ್ತದೆ ಎಂದರೆ ಸರಿಯಲ್ಲ. ಪೋಡು ಆದರೆ ಪ್ರತ್ಯೇಕವಾದ ಪಹಣಿ ಬರುತ್ತದೆ ಎಂದರೆ ಸರಿ. ನಮ್ಮ ಜಮೀನು ಪೋಡು ಆಗಿ ಪ್ರತ್ಯೇಕವಾದ ಪಹಣಿ ಆದ ಬಗ್ಗೆ ಪಹಣಿಯನ್ನು ಹಾಜರು ಪಡಿಸಲು ತೊಂದರೆ ಇರಲಿಲ್ಲ. ನಿ.ಡಿ.3 ದಾಖಲೆಯಲ್ಲಿ ಪದ್ಮಯ್ಯ ರವರಿಗೆ, ಸುಬ್ಬಯ್ಯ ಬಿನ್ ಬೊಮ್ಮಯ್ಯ ರವರಿಗೆ ಮತ್ತು ಸುಬ್ಬಯ್ಯ ಬಿನ್ ಈರಯ್ಯ ರವರಿಗೆ ತಲಾ 2 ಎಕರೆ ಜಮೀನು ಎಂದು ನಮೂದು ಇದೆ ಎಂದರೆ ಸರಿ. ನಿ.ಡಿ.3 ರಲ್ಲಿ ಸರ್ವೆ ನಂಬರ್ 114 ರಲ್ಲಿ ಕಾಣಿಸಿರುವ ವಿಸ್ತೀರ್ಣ ನಿ.ಡಿ.6 ರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ವಾದಿಯ ಜಮೀನನ್ನು ಕಬಳಿಸುವ ಉದ್ದೇಶದಿಂದ ನಿ.ಡಿ.1 ರಿಂದ 6 ಅನ್ನು ಈ ಕೇಸಿಗಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

11. 2 ನೇ ಪ್ರತಿವಾದಿಯ ಜಮೀನಿನ ಉಸ್ತುವಾರಿಯನ್ನು ನಾವು ನೋಡುತ್ತಿಲ್ಲ. 2 ನೇ ಪ್ರತಿವಾದಿ ಆಕೆಯ ಪರವಾಗಿ ಈ ಪ್ರಕರಣವನ್ನು ನಡೆಸಲು ನಮಗೆ ಅಧಿಕಾರ ಪತ್ರವನ್ನು ನೀಡಿಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ